ಶ್ರೀ ಕೆ. ರಾಮಭಟ್.—ಈಗ ೩ ಹುದ್ದೆಗಳು ಖಾಲಿ ಇವೆ. ಒಂದು ಆಂಗ್ಲಭಾಷೆ ಹುದ್ದೆ, ಇನ್ನೊಂದು ಪ್ರಾಣಿ ಶಾಸ್ತ್ರ ಹುದ್ದೆ, ಮತ್ತೊಂದು ಭೌತಶಾಸ್ತ್ರ ಹುದ್ದೆ. ಇವು ೧೯೭೫ನೇ ಇಸವಿಯಿಂದಲೂ ಖಾಲಿ ಇವೆ. ೪—೫ ವರ್ಷಗಳಿಂದಲ್ಲೂ ಈ ಹುದ್ದೆಗಳು ಖಾಲಿ ಇವೆಯೆಲ್ಲಾ, ಆ ಕಾಲೇಜಿನಲ್ಲಿ ಓದುತ್ತಿರುವ ಮಕ್ಕಳ ಸ್ಥಿತಿ ಏನಾಗಬೇಕು ಹೇಳಿ? ಆ ಸರ್ಕಾರೀ ಕಾಲೇಜಿಗೆ ಹೆಚ್ಚು ಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ತಾತ್ಕಾಲಿಕವಾಗಿಯಾದರೂ ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಆ ಹುದ್ದೆಗಳು ಖಾಲಿ ಇದ್ದರೂ ಸಹ ಆ ಹಂಡುಗರ ಪಾಠಪ್ರವಚನಗಳಿಗೇನೂ ತೊಂದರೆಯಾಗಿಲ್ಲ. ಅಲ್ಲಿ ಈಗ ಇರತಕ್ಕಂಥಾವರೇ ಆ ಪಾಠ ಪ್ರವಚನಗಳನ್ನು ಹೇಳಿಕೊಂಡು ಮುಂದುವರೆಸುತ್ತಿದ್ದಾರೆ. ಈಗ ಆ ಕೆಲಸದಲ್ಲಿ ಯಾರು ಮುಂದುವರೆಯುತ್ತಿದ್ದಾರೆ ಅವರಿಗೆ ಹೈಕೋರ್ಟ್‌ನಲ್ಲಿ ತಮಗೆ ಏನು ಅನ್ಯಾಯ ಆಗುತ್ತದೋ ಅನ್ನುವ ಒಂದು ಭಾವನೆ ಬಂದಿದೆಯೇ ವಿನಾ ಆ ಮಕ್ಕಳಿಗೆ ಪಾಠ ಪ್ರವಚನಗಳ ಬಗ್ಗೆ ಏನೂ ತೊಂದರೆಯಾಗಿಲ್ಲ. ತಾತ್ಕಾಲಿಕವಾಗಿಯಾದರೂ ಆ ಹುದ್ದೆಗಳನ್ನು ಖಾಯಂ ಮಾಡಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಈ ಕೇಸು ಹೈಕೋರ್ಟ್‌ನಲ್ಲಿರುವುದರಿಂದ ಈಗ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮ ತೊಂದರೆ ಏನು ಅನ್ನುವುದು ಸಹ ನನಗೆ ಗೊತ್ತಿದೆ.

ಶ್ರೀ ಕೆ. ರಾಮಭಟ್.—ನಾನು ಸರ್ಕಾರೀ ಕಾಲೇಜಿಗೆ ಹೋಗಿದ್ದೇನೆ. ನನಗೆ ತಿಳಿದ ಹಾಗೆ ಅಲ್ಲಿ ಪ್ರಿನ್ಸಿಪಾಲರಿಗೆ ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಡುವಂಥಾ, ನೌಕರರನ್ನು ತಾತ್ಕಾಲಿಕವಾಗಿ ೩—೩ ತಿಂಗಳಿಗೆ ನೇಮಕ ಮಾಡಿಕೊಳ್ಳುವಂಥಾ ಒಂದು ಅಧಿಕಾರ ಇದೆ. ಆದುದರಿಂದ ತಾವು ಈಗ ಏನು ಉತ್ತರ ಹೇಳಿದಿರಿ ಅದು ಸರಿಯಾದುದಲ್ಲ. ನಾನು ವಿಷಯವನ್ನು ಸಂಗ್ರಹಣೆ ಮಾಡಿಯೇ ಹೇಳುತ್ತಿದ್ದೇನೆ. ಆದುದರಿಂದ ತಾವು ತಾತ್ಕಾಲಿಕವಾಗಿಯಾದರೂ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯ ಹಾಗೆ ಇರುವುದಾದರೆ ಅದನ್ನು ವಿಚಾರ ಮಾಡಿಸುತ್ತೇನೆ. ಆ ಖಾಲಿ ಇರತಕ್ಕಂಥಾ ಹುದ್ದೆಗಳನ್ನು ಆದಷ್ಟು ಜಾಗ್ರತೆ ತುಂಬುವುದಕ್ಕೆ ಸಾಧ್ಯವೇ ಎನ್ನುವುದನ್ನು ವಿಚಾರಿಸಬೇಕಾಗಿದೆ ಅಲ್ಲದೆ ಈ ಕೇಸು ಹೈಕೋರ್ಟ್‌ನಲ್ಲಿದ್ದರೂ ಸಹ ಕಾನೂನು ಪ್ರಕಾರ ಆ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಸಾಧ್ಯವಾಗುತ್ತದೆಯೇ ಅನ್ನುವುದನ್ನೂ ಸಹ ನಾನು ವಿಚಾರ ಮಾಡಿಸುತ್ತೇನೆ.

Temples under the control of Endorsements Department in Gulbarga District.

612. SRI PRABHAKAR R. TELKAR (Chitapur).—Will the Minister of State for Marketing and Muzrai be pleased to state :—

(*a*) the No. of temples taken under the control of Endowments Department, Gulbarga District (particulars of each taluk with the name of the temples) be furnished ;

(*b*) the criteria for taking the temples under the control of Endowments Department ;

(*c*) whether there is any proposal for construction of Kalyan Mantap in Gulbarga District ;

if so, the particulars of such Mantaps Temples where they are proposed to be constructed be furnished ?

SRI SUDHENDRA RAO KASABE (Minister of State for Marketing and Muzrai).—

(*a*) i) Sri Dattatrayaswamy Temple Ghangapur Taluk, Afzalpur.

ii) Sri Anvirbhadra Temple, Korwar, Taluk Chittapur.

(*b*) i) In case of default on the part of the Trustees in discharging their duties and,

ii) If any application is submitted by an Endower or Trustee for the Endowed property being taken under Government Superintendence.

(*c*) Proposals for construction of Kalyan Mantaps in the following villages of Gulbarga District are being examined :

Sl. No.	Place where Kalyan Mantap is proposed	Taluk
1.	Sri Mallikarjun Temple Chinamalla.	Afzalpur
2.	Sri Bhagyawanti Temple, Ghattarga.	Afzalpur
3.	Sri Myalarling Temple, Mailapura.	Yadgir
4.	Sri Balaji Temple, Borbanda.	Yadgir
5.	Sri Basaveshwar Temple, Venkatapur.	Shorapur
6.	Sri Nagavelamba Temple, Nagai.	Chittapur
7.	Sri Chandralamba Temple, Sonnathi	Chittapur

ಶ್ರೀ ಪ್ರಭಾಕರ್ ಆರ್. ತೇಲ್ಕರ್.—ತಾವು ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಧರ್ಮದರ್ಶಿಗಳು ತಮ್ಮ ಕೆಲಸವನ್ನು ತಪ್ಪಿದಲ್ಲಿ ಅಥವಾ ದತ್ತಿ ಆಸ್ತಿಯನ್ನು ಸರಕಾರೀ ಅಧೀಕ್ಷಣೆಗೆ ತೆಗೆದುಕೊಳ್ಳಲು ದತ್ತಿ ಕೊಡುವವರ ಅಥವಾ ಧರ್ಮದರ್ಶಿಗಳ ಯಾವುದೇ ಅರ್ಜಿಗಳನ್ನು ಸಲ್ಲಿಸಲ್ಪಟ್ಟಿದರೆ ಅಂಥಾವು ಗಳನ್ನು ಈ ಧರ್ಮದತ್ತಿ ಇಲಾಖೆಗೆ ಒಳಪಡಿಸುತ್ತೀವೆ ಅಂತ ಹೇಳಿದ್ದೀರಿ. ಈಗ ತಾವು ಇದರಲ್ಲಿ ಏನು ಗುಡಿ ಹೆಸರು ಕೊಟ್ಟಿದ್ದೀರಿ ಇದರಲ್ಲಿ ಸಾಕಷ್ಟು ಟ್ರಸ್ಟೀಸ್ ಕೂಡ ಇಲ್ಲ, ಮೇಲಾಗಿ ಲೀಗಲ್ ಸ್ಯಾಂಕ್ಷೇನೂ ಇಲ್ಲ. ಇದರಲ್ಲಿ ಬೇಕಾದಷ್ಟು ಹಣ ಮಿಸ್‌ಅಪ್ರೋಪ್ರಿಯೇಷನ್ ಆಗುತ್ತಾ ಇದೆ. ಇದನ್ನು ಯಾರು ಈಗ ನೋಡುವವರೇ ಇಲ್ಲ. ಈ ದೃಷ್ಟಿಯಿಂದ ನಾನು ತಮ್ಮನ್ನು ಕೇಳುವುದೇನೆಂದರೆ ಬೇರೆ ಗುಡಿಗಳು ಏನು ಇವೆ ಅದನ್ನು ಯಾವರೀತಿಯಾಗಿ ಸರಕಾರೀ ಅಧಿಕ್ಷಣೆಗೆ ತೆಗೆದುಕೊಂಡಿದ್ದೀರೋ ಅದೇ ರೀತಿಯಾಗಿ ಇದನ್ನೂ ಕೂಡ ತೆಗೆದುಕೊಳ್ಳುತ್ತೀರಾ ?

ಶ್ರೀ ಸುದಿಂಧ್ರರಾವ್ ಕಸಬೆ.—ದೇವಸ್ಥಾನಗಳ ಆಸ್ತಿಪಾಸ್ತಿಗಳು ಏನಾದರೂ ಹೆಚ್ಚಿಗೆ ಇದ್ದು ಅವುಗಳಿಗೆ ಧಕ್ಕೆ ಬಂದಲ್ಲಿ ಅಂಥಾದ್ದೇನಾದರೂ ಇದ್ದರೆ ಅವುಗಳನ್ನು ಈ ಸರ್ಕಾರದ ಧರ್ಮದತ್ತಿ ಇಲಾಖೆಗೆ ತೆಗೆದುಕೊಳ್ಳಬಹುದು.

ಶ್ರೀ ಪ್ರಭಾಕರ್ ತೇಲ್ಕರ್.—ನನ್ನ 'ಇ' ಪ್ರಶ್ನೆಗೆ ಉತ್ತರವಾಗಿ ೭ ಕಡೆಗಳಲ್ಲಿ ಕಲ್ಯಾಣ ಮಂಟಪ ಗಳನ್ನು ಕಟ್ಟಿಸುವ ಬಗ್ಗೆ ಸಲಹೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಅಂದರೆ ಈ ಎಲ್ಲ ಕಲ್ಯಾಣ ಮಂಟಪಗಳನ್ನು ಧರ್ಮದರ್ಶಿ ಇಲಾಖೆಯ ನಿಯಂತ್ರಣದಲ್ಲಿ ಕಟ್ಟಿಸಲಾಗುತ್ತದೋ ಅಥವಾ ಪ್ರೈವೇಟ್ ಟ್ರಸ್ಟಿಗಳು ಇರುವ ಕಡೆಗಳಲ್ಲಿಯೂ ಕಟ್ಟಿಸಲಾಗುತ್ತದೋ ಎಂಬುದನು ತಿಳಿಸುತ್ತೀರಾ?

ಶ್ರೀ ಸುಧೀಂದ್ರರಾವ್ ಕಸಬೆ.—ಇಲ್ಲಿ ಕೆಲವು ಧರ್ಮದರ್ಶಿ ಇಲಾಖೆ ನಿಯಂತ್ರಣದಲ್ಲಿ ಬರುತ್ತವೆ, ಮತ್ತೆ ಕೆಲವು ಕಡೆಗಳಲ್ಲಿ ಸ್ಥಳೀಯವಾಗಿ ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟರೆ ಸರ್ಕಾರ ಇನ್ನೂಳಿದ ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟು ಕಟ್ಟಿಸತಕ್ಕಂಥ ಕೆಲವು ಕಲ್ಯಾಣ ಮಂಟಪಗಳಿವೆ.

ಶ್ರೀ ಪ್ರಭಾಕರ್ ತೇಲ್ಕರ್.—ನನ್ನ ಜಿಲ್ಲೆಯಲ್ಲಿ ಸಾಕಷ್ಟು ಗುಡಿಗಳಿವೆ. ಮತ್ತು ಸಾಕಷ್ಟು ಮದುವೆಗಳು ಸಹ ಆಗುತ್ತಿವೆ. ಆದಕಾರಣ ಬೇರೆ ದೇವಾಲಯಗಳ ಹತ್ತಿರವೂ ಕಲ್ಯಾಣ ಮಂಟಪ ಗಳನ್ನು ಕಟ್ಟಿಸಲು ಸರ್ಕಾರ ಏರ್ಪಾಡು ಮಾಡುತ್ತದೆಯೇ?

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ, ಬೇರೆ ದೇವಸ್ಥಾನಗಳ ಹತ್ತಿರ ಕಲ್ಯಾಣ ಮಂಟಪ ಕಟ್ಟಿಸಬೇಕೆಂದು ಅರ್ಜಿಗಳು ಬಂದರೆ, ಆ ಬಗ್ಗೆ ತಹಶೀಲ್ದಾರರಿಂದ ಅಲ್ಲಿ ಯಾವ ಪ್ರಮಾಣ ದಲ್ಲಿ ಮದುವೆಗಳು ಆಗುತ್ತಿವೆ ಎಂಬುದನ್ನು ಪರಿಶೀಲನೆ ಮಾಡಿಸಿ, ಅಗತ್ಯ ಕಂಡು ಬಂದರೆ ಕಲ್ಯಾಣ ಮಂಟಪ ಕಟ್ಟಿಸಲು ಅನುಮತಿ ಕೊಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ಸ್ವಾಮಿ, ಈ ಮೂಲಕ ನಾನು ಸರ್ಕಾರಕ್ಕೆ ಬೇಡಿಕೊಳ್ಳುವು ದೇನೆಂದರೆ, ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಸಾಕಷ್ಟು ಮಹತ್ವದಿಂದ ಕೂಡಿದ ಗುಡಿಗಳಿವೆ. ಈ ಗುಡಿಗಳಿಗೆ ಸೇರಿದ ಹಣ ಹಾಗೂ ಆಸ್ತಿಯನ್ನು ಕೆಲವರು ದುರುಪಯೋಗಪಡಿಸಿ ಕೊಳ್ಳುತ್ತಿರುವ ಕಾರಣ, ಅವು ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡುತ್ತಾರೆಯೇ ಎಂದು?

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಸದಸ್ಯರು ಅಂತಹ ದೇವಸ್ಥಾನಗಳ ವಿವರಗಳನ್ನು ಸರ್ಕಾರಕ್ಕೆ ಕೊಟ್ಟರೆ, ನಾವು ಅದನ್ನು ಪರಿಶೀಲನೆ ಮಾಡಿ. ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತೇವೆ.

Land in Hosanagar Taluk

644. SRI SHEERNALY CHANDRASHEKAR (Hosanagar).—Will the Minister for Revenue and Agriculture be pleased to state;—

(a) whether the Government had issued an order to take back all the twenty to twenty-two thousand acres of land to Revenue Department from the Forest Department in Hosanagar Taluk which was handed over to the Forest Department from Revenue Depart ment and kept as propo ed Forest;

(b) if so the reasons why the order was not communicated to the concerned authorities at Hosanagar;

(c) whether the Government is aware that one or two hundred acres of land is in the available list in Hosanagar Taluk even though the darkast application are in thousands?

SRI S. BANGARAPPA.—(Minister for Revenue and Agriculture).—

(a) No.

(b) Does not arise in view of reply to (a) above.

(c) An extent of 340 acres 26 guntas of land as on 1-4-80 is available for disposal for agriculture purpose. There are 368 darkast application spending in Taluk Office, Hosanagar Taluk.

ಶ್ರೀ ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಇಲ್ಲಿ ಕೊಟ್ಟಿರುವ ಉತ್ತರ ನೋಡಿ ನನಗೆ ಆಶ್ಚರ್ಯ ವಾಯಿತು. ಈ ಮೊದಲು ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ೨೨ ಸಾವಿರ ಎಕರೆ ಪ್ರದೇಶವನ್ನು ಒಬ್ಬರು ತಹಶೀಲ್ದಾರರು ಅರಣ್ಯ ಇಲಾಖೆಗೆ ವಹಿಸಿಕೊಟ್ಟರು. ಇದರಿಂದ ೬-೮